# ಕನ್ನಡ ಕಾರಂಜಿ

## ದಶಮಾನೋತ್ಸವ ಸ್ಮರಣ ಸಂಚಿಕೆ

೧೯೮೭—೧೯೯೭

ಕ ನ್ನ ಡ ಗೆ ಳೆ ಯ ರ ಬ ಳ ಗ
ತಲಕಾಡು ಸುಬ್ಬರಾಯರ ಬೀದಿ, ನೆಲಮಂಗಲ-562 123,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

# ಕನ್ನಡ ಕಾರಂಜಿ

## ದಶಮಾನೋತ್ಸವ ಸ್ಮರಣ ಸಂಚಿಕೆ

೧೯೮೩ - ೧೯೯೩

ಪ್ರಧಾನ ಸಂಪಾದಕರು
**ಎನ್. ವಿಜೇಂದ್ರರಾವ್**

ಸಹ ಸಂಪಾದಕರು
**ಎಂ. ವಿ. ರಾಘವೇಂದ್ರರಾವ್ ಮತ್ತು ಎಸ್. ಎಲ್. ನಾಗೇಂದ್ರ**

ಕ ನ್ನ ಡ ಗೆ ಳೆ ಯ ರ ಬ ಳ ಗ
**ತಲಕಾಡು ಸುಬ್ಬರಾಯರ ಬೀದಿ**
**ನೆಲಮಂಗಲ-562 123-**

# ನೆಲಮಂಗಲ

ಡಾ|| ಸಿದ್ಧಯ್ಯ ಪುರಾಣಿಕ

ನೆಲಮಂಗಲ
ಜಲಮಂಗಲ
ಫಲ ಮಂಗಲ ಕನ್ನಡದ ।

ಮಲೆ ಮಂಗಲ
ಶಿಲೆ ಮಂಗಲ
ಕಲೆ ಮಂಗಲ ಕನ್ನಡದ॥

ತನು ಮಂಗಲ
ಮನ ಮಂಗಲ
ಧನ ಮಂಗಲ ಕನ್ನಡದ ।

ವನ ಮಂಗಲ
ಜನ ಮಂಗಲ
ಧನ ಮಂಗಲ ಕನ್ನಡದ॥

ಈ ನಾಡಿನ
ಈ ಗಾಡಿಯ
ನೋಡುವೆ ಇನ್ನೆಲ್ಲಿ ?

ಸಿರಿ–ಬೀಡಿನ
ಕರುನಾಡಿನ
ಮೋಡಿಯು ಇನ್ನೆಲ್ಲಿ ?

ನೆಲ ನಿಧಿಯು
ಜಲ ಸುಧೆಯು
ನುಡಿ ಮಧುವಿನ ಸೆಲೆಯಂತೆ

ನಡೆ ವಿಧುವು
ಕಡು ಮೃದುವು
ಇದೊ ಅಮೃತದ ಅಲೆಯಂತೆ :

ಬಾ ದುಡಿಯುವ
ಬಾ ಮಡಿಯುವ
ಕನ್ನಡ ನುಡಿಗಾಗಿ

ತನು ಮನ ಧನ
ಮುಡಿಪಾಗಲಿ
ಕನ್ನಡ ಗುಡಿಗಾಗಿ.